**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 113/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹನುಮಂತಪ್ಪ | ಪ್ರಾ.ಸಾ: 9 |
| ತಂದೆಯ/ಗಂಡನ ಹೆಸರು | : | ಕೆಂಪಣ್ಣ | |
| ವಯಸ್ಸು | : | 53 ವರ್ಷ | |
| ಕೆಲಸ | : | ಎ.ಎಸ್.ಐ., ಭರಮಸಾಗರ ಪೊಲೀಸ್ ಠಾಣೆ, | ಸಾ ಪ್ರ ಬೋ |
| ವಾಸ | : | ಭರಮಸಾಗರ | ದಿ:01.04.2026 |

**ಮುಖ್ಯ ವಿಚಾರಣೆ : ಕಲಂ 299 ಸಿ.ಆರ್.ಪಿ.ಸಿ. ರೀತ್ಯಾ**

1. ನಾನು 2016 ರಿಂದ 27.03.2026 ರವರೆಗೆ ನಾನು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನ್ಯಾಯಾಲಯದಿಂದ ನಮ್ಮ ಠಾಣೆಗೆ ಆರೋಪಿತನಿಗೆ ಸಂಬಂಧಿಸಿದಂತೆ ಉದ್ಘೋಷಣೆಯನ್ನು ಜಾರಿಮಾಡುವಂತೆ ಆದೇಶಿಸಿದ್ದು, ಅದರಂತೆ ನಮ್ಮ ಠಾಣೆಯ ಪೊಲೀಸ್ ಉಪನಿರೀಕ್ಷಕರು ನನಗೆ ಆರೋಪಿತನಿಗೆ ಸಂಬಂಧಿಸಿದಂತೆ ಉದ್ಘೋಷಣೆಯನ್ನು ಜಾರಿಮಾಡಿ ವರದಿ ಮಾಡುವಂತೆ ಸೂಚಿಸಿದ್ದರು. ಅದರಂತೆ ನಾನು ದಿನಾಂಕ 15.12.2025 ರಂದು ಆರೋಪಿತನ ವಾಸ ಸ್ಥಳವಾದ ಕರಿಸಿದ್ದೇಶ್ವರ ನಿಲಯ, ಸಿ.ಎನ್. ರಸ್ತೆ, ಮನೆ ನಂ.433/4, ಡಬಲ್ ತಿಯೇಟರ್ ಸಮೀಪ, ಭದ್ರಾವತಿ ಟೌನ್, ಶಿವಮೊಗ್ಗ ಜಿಲ್ಲೆಯ ಆರೋಪಿತನ ಮನೆಯ ಬಳಿ ಹೋಗಿ ಆರೋಪಿತನ ಇರುವಿಕೆಯ ಕುರಿತು ಕೇಳಲಾಗಿ ಆರೋಪಿತನು ಸುಮಾರು ವರ್ಷಗಳಿಂದ ಸದರಿ ಮನೆಯಲ್ಲಿ ವಾಸಿಸುತ್ತಿಲ್ಲ ಎಂದು ಹೇಳಿರುತ್ತಾರೆ. ನಂತರ ನಾನು ಭದ್ರಾವತಿ ಟೌನಿನ ರವಿಕುಮಾರ ಬಿನ್ ಈಶ್ವರಪ್ಪ ಮತ್ತು ಮಸ್ತಾಕ್ ಅಹಮ್ಮದ್ ಬಿನ್ ಮಸೂರ್ ಅಹಮ್ಮದ್ ರವರ ಸಮಕ್ಷಮದಲ್ಲಿ ಆರೋಪಿತನ ಮನೆಗೆ ಉದ್ಘೋಷಣೆಯ ವಾರೆಂಟ್‌ನ್ನು ಅಂಟಿಸಿರುತ್ತೇನೆ. ನಂತರ ಪಂಚರ ಸಮಕ್ಷಮದಲ್ಲಿ ಆರೋಪಿತನಿಗೆ ಸಂಬಂಧಿಸಿದಂತೆ ಸದರಿ ಸ್ಥಳದಲ್ಲಿ ಟಾಂ ಹೊಡೆಸಿರುತ್ತೇನೆ. ಆರೋಪಿತನಿಗೆ ಸಂಬಂಧಿಸಿದಂತೆ ಸ್ಥಿರ ಮತ್ತು ಚರ ಆಸ್ತಿ ಇರುವ ಕುರಿತು ತಹಶೀಲ್ದಾರ್, ಭದ್ರಾವತಿ ರವರಿಗೆ ಮತ್ತು ನಗರಸಭೆ, ಭದ್ರಾವತಿ ಇವರಿಗೆ ನಿವೇಧನೆ ನೀಡಿರುತ್ತೇನೆ. ಸದರಿ ನಿವೇಧನೆಗಳ ಕುರಿತು ತಹಶೀಲ್ದಾರ್, ಬದ್ರಾವತಿ ರವರು ವರದಿಯನ್ನು ನೀಡಿದ್ದು ಅದರಂತೆ ಆರೋಪಿತನ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇಲ್ಲವೆಂದು ವರದಿ ನೀಡಿರುತ್ತಾರೆ. ನಗರಸಭೆ, ಭದ್ರಾವತಿ ರವರು ಮಾಹಿತಿಯನ್ನು ನೀಡಿ ಆರೋಪಿತನ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇಲ್ಲ ಎಂದು ವರದಿ ಮಾಡಿರುತ್ತಾರೆ.

3. ನ್ಯಾಯಾಲಯದಿಂದ ಆರೋಪಿತನಿಗೆ ಸಂಬಂಧಿಸಿದಂತೆ ಆದೇಶಿಸಿರುವ ಉದ್ಘೋಷಣೆಯ ವಾರೆಂಟ್‌ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ.11 ಎಂದು ಗುರುತಿಸಲಾಯಿತು. ದಿನಾಂಕ 15.12.2025 ರಂದು ಜರುಗಿಸಿರುವಂತಹ ಉದ್ಘೋಷಣೆಯ ಪಂಚನಾಮೆಯನ್ನು ನಿಪಿ.12 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಉದ್ಘೋಷಣೆಯನ್ನು ಜಾರಿ ಮಾಡಿದ ಕುರಿತಾದ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ. 13 ಮತ್ತು 14 ಎಂದು ಗುರುತಿಸಲಾಯಿತು. ಆರೋಪಿತನಿಗೆ ಸಂಬಂಧಿಸಿದಂತೆ ಸ್ಥಿರ ಆಸ್ತಿ ಇಲ್ಲ ಎಂಬುವ ಕುರಿತು ತಹಶೀಲ್ದಾರ್, ಭದ್ರಾವತಿರವರು ಮತ್ತು ನಗರಸಭೆ, ಭದ್ರಾವತಿರವರು ನೀಡಿರುವ ವರದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.15 ಮತ್ತು 16 ಎಂದು ಗುರುತಿಸಲಾಯಿತು. ಈ ಮೇಲ್ಕಂಡಂತೆ ಆರೋಪಿತನಿಗೆ ಸಂಬಂಧಿಸಿದಂತೆ ಉದ್ಘೋಷಣೆಯ ವಾರೆಂಟ್‌ನ್ನು ಮತ್ತು ಜಪ್ತಿಯ ವಾರೆಂಟ್‌ನ್ನು ಜಾರಿಮಾಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ